Inward No. 01
Date 5/4/12 Sign [signature]

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕೆ.ಎಲ್.ಇ. ದಂತ ಮಹಾವಿದ್ಯಾಲಯ, ಬೆಂಗಳೂರು ಇವರ ವಿದ್ಯಾರ್ಥಿಗಳಿಗೆ ಕ್ಲಿನಿಕಲ್ ಸೌಲಭ್ಯವನ್ನು ಮುಂದುವರೆಸುವ ಬಗ್ಗೆ.

**ಓದಲಾಗಿದೆ:**
1. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ, ಭಾರತ ಸರ್ಕಾರದ ಪತ್ರ ಸಂಖ್ಯೆ: ವಿ. 12017/30/96-ಪಿಎಂಎಸ್ (ವಿಜಎಲ್-VI), ದಿನಾಂಕ: 23.01.2003.
2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಪತ್ರ ಸಂಖ್ಯೆ: ಎಂಡಿಪಿ(ಕ್ಲಿ)/82/ 2011-12, ದಿನಾಂಕ: 03.03.2012.

*****

**ಪ್ರಸ್ತಾವನೆ:**

ಕೆ.ಎಲ್.ಇ. ದಂತ ಮಹಾವಿದ್ಯಾಲಯ, ಬೆಂಗಳೂರು ರವರು ದಂತ ವೈದ್ಯಕೀಯ ಕೋರ್ಸ್ ನಡೆಸುವ ಸಂಬಂಧ ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ, ಭಾರತ ಸರ್ಕಾರ ರವರಿಂದ ಮಾನ್ಯತೆ ಪಡೆಯಲಾಗಿದೆ.

ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಕೆ.ಎಲ್.ಇ. ದಂತ ಮಹಾವಿದ್ಯಾಲಯ, ಬೆಂಗಳೂರು ಇವರ ವಿದ್ಯಾರ್ಥಿಗಳಿಗೆ ಕೆ.ಸಿ. ಜನರಲ್ ಆಸ್ಪತ್ರೆ, ಬೆಂಗಳೂರು ಇಲ್ಲಿ ಕ್ಲಿನಿಕಲ್ ಸೌಲಭ್ಯವನ್ನು ಮುಂದುವರೆಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

### ಸರ್ಕಾರದ ಆದೇಶ ಸಂಖ್ಯೆ: ಆಕುಕ 170 ಸಿಜಿಎಂ 2012, ಬೆಂಗಳೂರು ದಿನಾಂಕ: 28.03.2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕೆ.ಎಲ್.ಇ. ದಂತ ಮಹಾವಿದ್ಯಾಲಯ, ಬೆಂಗಳೂರು ಇವರ ವಿದ್ಯಾರ್ಥಿಗಳಿಗೆ ಕೆ.ಸಿ. ಜನರಲ್ ಆಸ್ಪತ್ರೆ, ಬೆಂಗಳೂರು ಇಲ್ಲಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಕ್ಲಿನಿಕಲ್ ಸೌಲಭ್ಯವನ್ನು ಮುಂದುವರೆಸಲು ಸರ್ಕಾರ ಮಂಜೂರಾತಿ ನೀಡಿದೆ.

1) ನೀಡಲಾಗಿರುವ ಕ್ಲಿನಿಕಲ್ ಸೌಲಭ್ಯದ ಅವಧಿಯು ಮೂರು ವರ್ಷಗಳಿಗೆ ಮಾತ್ರ ಸೀಮಿತವಾಗಿರುತ್ತದೆ.

2) ಪ್ರಸ್ತುತ ವರ್ಷದಲ್ಲಿ ಡೆಂಟಲ್ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ನಿಗದಿತ ಶುಲ್ಕದ ಹಣವನ್ನು ಪೂರ್ಣ ಮತ್ತು ಮುಂಗಡವಾಗಿಯೇ ಪಾವತಿಸಿಕೊಂಡ ನಂತರವೇ ಸಂಸ್ಥೆಯ ವಿದ್ಯಾರ್ಥಿಗಳಿಗೆ ಕ್ಲಿನಿಕಲ್ ಸೌಲಭ್ಯ ನೀಡತಕ್ಕದ್ದು. ತಪ್ಪಿದ್ದಲ್ಲಿ ಸಂಬಂಧಿಸಿದ ವೈದ್ಯಾಧಿಕಾರಿಗಳು ಹೊಣೆಗಾರರಾಗಿರುತ್ತಾರೆ.

3) ಕ್ಲಿನಿಕಲ್ ಸೌಲಭ್ಯ ನೀಡಿದ ಅವಧಿಯಲ್ಲಿ ವಿದ್ಯಾರ್ಥಿಗಳಿಂದ ಆಸ್ಪತ್ರೆಗೆ ನಷ್ಟ ಉಂಟಾದಲ್ಲಿ ಈ ನಷ್ಟವನ್ನು ಸದರಿ ಸಂಸ್ಥೆಯೇ ಭರಿಸತಕ್ಕದ್ದು.

4) ಸದರಿ ಆದೇಶವನ್ನು ಹೊರಡಿಸಿದ ಮೂರು ತಿಂಗಳೊಳಗಾಗಿ ಕ್ಲಿನಿಕಲ್ ಸೌಲಭ್ಯವನ್ನು ಉಪಯೋಗಿಸಿಕೊಳ್ಳದೇ ಹೋದಲ್ಲಿ ಈ ಆದೇಶವನ್ನು ರದ್ದುಗೊಳಿಸಿದೆಯೆಂದು ಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

5/4/12

(ಪಿ. ನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಇವರಿಗೆ:

1. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.
2. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.
3. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಬೆಂಗಳೂರು ಜಿಲ್ಲೆ, ಬೆಂಗಳೂರು.
4. ವೈದ್ಯಕೀಯ ಅಧೀಕ್ಷಕರು, ಕೆ.ಸಿ. ಜನರಲ್ ಆಸ್ಪತ್ರೆ, ಬೆಂಗಳೂರು.
5. ಪ್ರಾಂಶುಪಾಲರು, ಕೆ.ಎಲ್.ಇ. ಸಂಸ್ಥೆ ದಂತ ಮಹಾವಿದ್ಯಾಲಯ, ನಂ. 20, ಯಶವಂತಪುರ 2ನೇ ಹಂತ, ತುಮಕೂರು ರಸ್ತೆ, ಬೆಂಗಳೂರು – 22.
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

PROCEEDINGS OF KARNATAKA GOVERNMENT

Subject :- Regarding continuing Clinical facilities for the Students of K.L.E. Dental College, Bangalore.

Read Out : 1. Letter No. V. 12017/30/96-PMS (VOL-VI), dated 23.01.2003 of Ministry of Health and Family Welfare, Government of India.

2. Letter No. MPD(Cli)/82/2011-12, dated 03.03.2012 of the Commissioner, Health and Family Welfare Services.

PREAMBLE :

As per Sl. No. (1) read out above, K.L.E. Dental College, Bangalore has obtained approval for conducting Dental Sciences Course from the Ministry of Health and Family Welfare, Government of India.

As per Letter in Sl. No. (2) read about above, the Commissioner, Health and Family Welfare Services, Bangalore has submitted proposal to Government requesting to continue the Clinical Facility for the Students of K.L.E. Dental College, Bangalore at K.C. General Hospital, Bangalore.

By verifying the proposal of the Commissioner, Health and Family Welfare Services, Government has passed Order as under.

GOVERNMENT ORDER NO. HFW 170 CGM 2012,
BANGALORE, DATED : 28.03.2012.

In view of the aspects detailed in the proposal, Government has accorded sanction to K.L.E. Dental College to continue Clinical Facility to its Students at K.C. General Hospital, Bangalore subject to following conditions.

1) The Clinical Facility granted is for a period of Three Years only.

2) The Clinical Facility shall be provided to the Students of the Institution only after collecting the stipulated charges in accordance with the Number of Dental Students for the year in full and in advance. Failing, the concerned Medical Officer will be responsible thereof.

3) In case of any loss caused to the Hospital by the Students during the period of Clinical Facility provided, such loss shall be made good by the said Institution.

...2

NOTARY ★ GOVT. OF KARNATAKA ★ G.N. VENKATARAVANAPPA Bangalore Metropolitan Area Reg. No. LAW 39 LCL 2009

4) ಸದರಿ ಆದೇಶವನ್ನು ಹೊರಡಿಸಿದ ಮೂರು ತಿಂಗಳೊಳಗಾಗಿ ಕ್ಲಿನಿಕಲ್ ಸೌಲಭ್ಯವನ್ನು ಉಪಯೋಗಿಸಿಕೊಳ್ಳದೇ ಹೋದಲ್ಲಿ ಈ ಆದೇಶವನ್ನು ರದ್ದುಗೊಳಿಸಿದೆಯೆಂದು ಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

5/4/12

(ಪಿ. ನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಇವರಿಗೆ:

1. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.
2. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.
3. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಬೆಂಗಳೂರು ಜಿಲ್ಲೆ, ಬೆಂಗಳೂರು.
4. ವೈದ್ಯಕೀಯ ಅಧೀಕ್ಷಕರು, ಕೆ.ಸಿ. ಜನರಲ್ ಆಸ್ಪತ್ರೆ, ಬೆಂಗಳೂರು.
5. ಪ್ರಾಂಶುಪಾಲರು, ಕೆ.ಎಲ್.ಇ. ಸಂಸ್ಥೆ ದಂತ ಮಹಾವಿದ್ಯಾಲಯ, ನಂ. 20, ಯಶವಂತಪುರ 2ನೇ ಹಂತ, ತುಮಕೂರು ರಸ್ತೆ, ಬೆಂಗಳೂರು – 22.
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.